ಮೂಲ ದಾವಾ ಸಂಖ್ಯೆ. 143/2013 ಪಿ ಡಬ್ಲ್ಯೂ 2

(ದಿನಾಂಕ 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ನಂ.1 ರಿಂದ 8 ರವರ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದಃ-

ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿತ್ತು. ನನಗೆ ಯಾವ ದಿನಾಂಕದಂದು ಸಮನ್ಸ ಬಂದಿರುತ್ತದಂತಾ ನನಗೆ ನೆನಪಿಲ್ಲ. ನನಗೆ ಯಾವುದೇ ಸಮನ್ಸ ಬಂದಿಲ್ಲ ಆದರೂ ಸಹಾ ನನಗೆ ಸಮನ್ಸ ಬಂದಿದೆ ಅಂತಾ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ನ್ಯಾಯಾಲಯದಲ್ಲಿ ಈ ದಿನ ಸಾಕ್ಷಿ ನುಡಿಯಲು ಖುದ್ದು ಬಂದಿರುತ್ತೇನೆ ನನಗೆ ಯಾರೂ ಕರೆದುಕೊಂಡು ಬಂದಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರವನ್ನು ನಾನು ವಿಜಯಾನಂದ್ ಇವರಿಗೆ ಹೇಳಿ ಬರೆಸಿದ್ದೇನೆ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬೆರದಿರುವ ವಿಚಾರ ಸಂಪೂರ್ಣ ನನಗೆ ಗೊತ್ತು. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ನಾನು ಕನ್ನಡ ಭಾಷ್ಷೆಯಲ್ಲಿ ಹೇಳಿ ಬರೆಸಿದ್ದೇನೆ. ವಕೀಲರು ಯಾವ ಭಾಷ್ಷೆಯಲ್ಲಿ ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ.

ಈ ದಾವೆಯನ್ನು ವಿಜಯಾನಂದ್ ಇವರು ಕೊಟ್ರಗೌಡ ಮತ್ತು ಇತರರ ಮೇಲೆ ದಾಖಲಿಸಿದ್ದಾರೆ. ಈ ದಾವೆಯಲ್ಲಿ ವಾದಿಯು ಏನು ಪರಿಹಾರವನ್ನು ಕೇಳಿ ದಾವೆ ದಾಖಲಿಸಿದ್ದಾರೆಂದರೆ ಸಾಕ್ಷಿಯು ವಾದಿಯು ಏನೂ ಪರಿಹಾರ ಕೇಳಿಲ್ಲವೆನ್ನುತ್ತಾರೆ. ವಾದಿ ಮತ್ತು ಪ್ರತಿವಾದಿ ನಂ.1 ರಿಂದ 8 ರವರ ಮನೆತನದ ಬಗ್ಗೆ ನನಗೆ ಮಾಹಿತಿ ಇದೆ. ಈಗ 90 ವರ್ಷದ ಹಿಂದೆ ವಾದಿ, ಪ್ರತಿವಾದಿಯರ ಮನೆತನದ ವಂಶಸ್ಥರು ಯಾರ್ಯಾರು ಬಾಳಿ ಬದುಕಿದ್ದಾರೆನ್ನುವುದರ ಬಗ್ಗೆ ನನಗೆ ಸ್ವಲ್ಪ ಸ್ವಲ್ಪ ಮಾಹಿತಿ ಇದೆ. ನನ್ನ ಮನೆ ಡೋರ್ ನಂಬರ್ ನನಗೆ ಗೊತ್ತಿಲ್ಲ ನಾನು ಅದನ್ನು ನೋಡಿಲ್ಲ. ನನ್ನ ಮನೆಯ ಚಕ್ಕುಬಂದಿ ಪೂಃ ದಾರಿ ಇದೆ. ಸದರಿ ದಾರಿಯು ಹೆಚ್ ಬಿ ಹಳ್ಳಿ ಯಿಂದ ಹಡಗಲಿಗೆ ಹೋಗುವ ಮುಖ್ಯ ರಸ್ತೆ ಇರುತ್ತದೆಂದರೆ ಸರಿ. ಪಃಕಣ ಇದೆ. ನನ್ನ ಮನೆಯ ಪಶ್ಚಿಮಕ್ಕೆ ನನ್ನ ಕಾಕ ಇವರಿಗೆ ಅದೇ ಆಸ್ತಿಯಲ್ಲಿ ಬಂದಿರುವಂತಹ ಒಂದು ಭಾಗದ ಮನೆ ಇದೆ ಎಂದರೆ ಸರಿ. ಉತ್ತರಕ್ಕೆ ಪ್ರತಿವಾದಿ ನಂ.1 ರಿಂದ 8 ರವರಿಗೆ ಸೇರಿದ ಇನ್ನೊಂದು ಆಸ್ತಿ ಮನೆ ನಂ.273/6 ಇರುತ್ತದೆಂದರೆ ಸರಿ. ದಕ್ಷಿಣಕ್ಕೆ ನಮ್ಮ ಆಸ್ತಿಯಲ್ಲಿ ನಮ್ಮ ಇನ್ನೊಬ್ಬ ಕಾಕನಾದ ಮಹಾದೇವಪ್ಪ ಇವನ ಹಿಸ್ಸೆಗೆ ಹೋದ ಭಾಗದ ಮನೆ ಇರುತ್ತದೆ.

ಮೂಲ ದಾವಾ ಸಂಖ್ಯೆ. 143/2013 ಪಿ ಡಬ್ಲ್ಯೂ 2

ನನ್ನ ಮನೆಯ ಆಸ್ತಿ ಸಹಾ ಪರಂಪೋಕ್ ಆಸ್ತಿ ಇರುತ್ತದೆಂದರೆ ಸರಿ. ನಮ್ಮ ಆಸ್ತಿಯನ್ನು ನಮ್ಮ ಹಿರಿಯರು ತಲೆತಲಾಂತರದಿಂದ ಸ್ವಾಧೀನದಲ್ಲಿರುವುದರಿಂದ ಅವರ ಹೆಸರನ್ನು ಡಿಮ್ಯಾಂಡಿನಲ್ಲಿ ಪಂಚಾಯ್ತಿಯವರು ಸೇರಿಸಿರುತ್ತಾರೆಂದರೆ ಸರಿ. ಯಾವುದೇ ಒಂದು ಆಸ್ತಿಯನ್ನು ಸ್ವಾಧೀನದಲ್ಲಿಲ್ಲವೆಂದರೆ ಸದರಿ ಆಸ್ತಿಯನ್ನು ಡಿಮ್ಯಾಂಡಿಗೆ ಸೇರಿಸುವುದಿಲ್ಲವೆಂದರೆ ಸರಿ. ನಾನು ಈ ದಾವೆಯಲ್ಲಿ ಪಕ್ಷಗಾರ ಇರುವುದಿಲ್ಲ. ಈ ದಾವೆಯಲ್ಲಿ ದಾವಾಸ್ತಿ ಬಯಲು ಜಾಗ ಇರುತ್ತದೆ. ಸದರಿ ದಾವಾಸ್ತಿಯ ಡೋರ್ ನಂಬರ್ ನನಗೆ ಗೊತ್ತಿಲ್ಲ. ವಿಸ್ತೀರ್ಣ ಪೂ-ಪ 60 ಮಳ, ಉ-ದ 52 ಮಳ ಇರುತ್ತದೆ. ನಾನು ದಾಖಲೆಗಳಾಧಾರದ ಮೇಲೆ ಅದರ ವಿಸ್ತೀರ್ಣವನ್ನು ಹೇಳುತ್ತಿದ್ದೇನೆ. ವಿಜಯಾನಂದ್ ಇವರು ದಾಖಲೆಯನ್ನು ತೋರಿಸಿದರು. ಸದರಿ ದಾಖಲೆಯು ನ್ಯಾಯಾಲಯದಲ್ಲಿ ಡಿಕ್ರಿಯಾದ ದಾಖಲೆಯಾಗಿರುತ್ತದೆ. ಅವರು ನನಗೆ ಸನ್ 2012-13 ರಲ್ಲಿ ತೋರಿಸಿರಬಹುದು. ವಾದಿ ಪ್ರತಿವಾದಿಯರು ಸನ್ 2012 ರಲ್ಲಿ ಜಗಳ ಮಾಡಿಕೊಂಡಿದ್ದರು. ದಾವಾಸ್ತಿಯ ಹಳೇ ಚಕ್ಕುಬಂದಿ ಪೂಃಬೆಟ್ಟಪ್ಪ ಇವರ ಸ್ವತ್ತು, ಪಃ ದಾರಿ, ಉಃ ಕೋಬಜ್ಜಿ ಇವರ ಸ್ವತ್ತು ಹಾಗೂ ದಃದೊಡ್ಡಬಸವನಗೌಡ ಇವರ ಸ್ವತ್ತು. ದಾವಾಸ್ತಿಯ ಹೊಸ ಚಕ್ಕುಬಂದಿ ಪೂಃ ಬೆಟ್ಟಪ್ಪ, ಪಃ ದಾರಿ, ಉಃಹಳ್ಳಿ ಮಲ್ಲಪ್ಪ ಹಾಗೂ ದಃ ಕೊಟ್ರಗೌಡ ಇವರ ತಾಯಿ ಪತ್ರಿ ಬಸಮ್ಮ ಇವರ ಸ್ವತ್ತು ಇರುತ್ತದೆ.

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ನಾನು ದಾವಾಸ್ತಿಯು ಗ್ರಾಮಠಾಣಾ ಆಸ್ತಿ ಅಂತಾ ಬರೆಸಿರುವುದಿಲ್ಲ. ಮೋರಿಗೇರಿ ಗ್ರಾಮದಲ್ಲಿ ಗ್ರಾಮಠಾಣಾ ಆಸ್ತಿ ಎಷ್ಟು ಇದೆ ಅಂತಾ ನನಗೆ ಗೊತ್ತಿಲ್ಲ. ಮೋರಿಗೇರಿ ಗ್ರಾಮದಲ್ಲಿ ಗ್ರಾಮಠಾಣಾ ಆಸ್ತಿ ಎಷ್ಟು ಇದೆ ಅಂತಾ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ನಾನು ಹೇಳಿ ಬರೆಸಿಲ್ಲ.

ನಾನು ಮೇಟಿ ಚನ್ನಬಸಪ್ಪ ಇವರನ್ನು ನೋಡಿಲ್ಲ ಅವರು ನನ್ನ ಜನನದ ಪೂರ್ವದಲ್ಲಿ ಗ್ರಾಮ ಬಿಟ್ಟು ಹೋಗಿರುತ್ತಾರೆ. ಚನ್ನಬಸಪ್ಪ ಇವರು ಯಾವಾಗ ಮರಣ ಹೊಂದಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ಚನ್ನಬಸಪ್ಪ ಇವರು ಎಲ್ಲಿ ವಾಸವಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಚನ್ನಬಸಪ್ಪ ಇವರು ಏನೇನು ಆಸ್ತಿ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ನಿಮ್ಮ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಮೇಟಿ ಚನ್ನಬಸಪ್ಪ ದಾವಾಸ್ತಿಯ ಮಾಲೀಕ ಮತ್ತು ಸ್ವಾಧೀನದಲ್ಲಿದ್ದ ಅಂತಾ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಮೇಟಿಯವರ ಆಸ್ತಿ ಅಂತಾ ಬರೆಸಿದ್ದೇನೆ ಎನ್ನುತ್ತಾರೆ. ನಾನು ಈ ವಿಚಾರವನ್ನು ವಾದಿಯ ಹೇಳಿಕೆ ಮೇರೆಗೆ ಬರೆಸಿರುತ್ತೇನೆ. ಮೇಟಿ ಚನ್ನಬಸಪ್ಪ ಇವರ ಆಸ್ತಿಯ ಡೋರ್ ನಂಬರ್ ನನಗೆ ಗೊತ್ತಿಲ್ಲ. ನಾನು ಮೇಟಿ ಬಸಮ್ಮನನ್ನು ನೋಡಿಲ್ಲ. ಮೇಟಿ ಬಸಮ್ಮ ಇವರಿಗೆ ಏನೇನು ಆಸ್ತಿ ಇತ್ತು ಅಂತಾ ನಾನು ಕೇಳಿ ತಿಳಿದುಕೊಂಡಿಲ್ಲ. ನಿಮ್ಮ ಸಾಕ್ಷ್ಯ

ಪ್ರಮಾಣಪತ್ರದಲ್ಲಿ ದಾವಾಸ್ತಿ ಮೇಟಿ ಚನ್ನಬಸಪ್ಪ ಇವರದು ನಂತರದಲ್ಲಿ ಮೇಟಿ ಚನ್ನಬಸವ್ವ ಇವರಿಗೆ ಬಂತು ಅಂತಾ ಹೇಳಿ ಬರೆಸಿದ್ದೀರಾ ಎಂದರೆ ಇಲ್ಲ ಸಾಕ್ಷಿ ಮುಂದುವರೆದು ಮೇಟಿಯವರ ಆಸ್ತಿ ಅಂತಾ ಹೇಳಿ ಬರೆಸಿದ್ದೇನೆ. ಅದನ್ನು ನಾನು ಚನ್ನಬಸಪ್ಪ ಇವರ ಸಹೋದರರ ಹೇಳಿಕೆ ಮೇರೆಗೆ ಬರೆಸಿರುತ್ತೇನೆ. ಮೇಟಿ ಚನ್ನಬಸಮ್ಮ ಇವರ ಹೆಸರಿಗೆ ಇರುವ ದಾಖಲೆಗಳನ್ನು ನಾನು ನೋಡಿಲ್ಲ. ನಿನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಸನ್ 1936 ರ ವಿಚಾರದ ಬಗ್ಗೆ ಏನಾದರೂ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಸನ್ 1936 ರ ವಿಚಾರ ನನಗೆ ಏನೂ ಗೊತ್ತಿಲ್ಲವೆನ್ನುತ್ತಾರೆ.

ಬಾವಿ ಬೆಟ್ಟಪ್ಪ ತಂದೆ ದೊಡ್ಡಮಲ್ಲಪ್ಪ ಇವರನ್ನು ನಾನು ನೋಡಿಲ್ಲ. ಬಾವಿ ಬೆಟ್ಟಪ್ಪ ಇವರ ವಂಶಸ್ಥರ ಬಗ್ಗೆ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿದ್ದೇನೆ. ಬಾವಿ ಬೆಟ್ಟಪ್ಪ ಇವರಿಗೆ ಲಿಂಗಜ್ಜ, ಬಸಣ್ಣ ಮತ್ತು ದಾನನಗೌಡ ಮೂರು ಜನ ಮಕ್ಕಳು. ಸದರಿ ಮೂರು ಜನರಿಗೆ ಯಾರ್ಯಾರು ಮಕ್ಕಳು ಅಂತಾ ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಯರ ಸಂಪೂರ್ಣ ವಂಶವೃಕ್ಷದ ಬಗ್ಗೆ ನನಗೆ ಗೊತ್ತಿಲ್ಲವೆಂದರೆ ಸರಿ. ಬಾವಿ ಬೆಟ್ಟಪ್ಪ ತಂದೆ ದೊಡ್ಡಮಲ್ಲಪ್ಪ ಇವರು ಯಾವ ವರ್ಷದಲ್ಲಿ ಯಾರಿಂದ ಆಸ್ತಿ ಖರೀದಿ ಮಾಡಿರುತ್ತಾರಂತಾ ನನಗೆ ಹೇಳಲು ಬರುವುದಿಲ್ಲ. ನಾನು ಮೂಲ ಖರೀದಿ ಪತ್ರವನ್ನು ನೋಡಿರುತ್ತೇನೆ. ಸದರಿ ಮೂಲ ಖರೀದಿ ಪತ್ರವನ್ನು ಸನ್ 2012-13 ರಲ್ಲಿ ನೋಡಿರುತ್ತೇನೆ. ಸದರಿ ಖರೀದಿಪತ್ರ ಎಷ್ಟು ರೂಪಾಯಿ ಮುಖಬೆಲೆಯ ದಾಖಲೆಯಲ್ಲಿತ್ತು ಎನ್ನುವುದನ್ನು ನಾನು ಪರಿಶೀಲಿಸಿರುವುದಿಲ್ಲ. ಸಾಮಾನ್ಯವಾಗಿ ಒಂದು ಆಸ್ತಿ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ದಾಖಲಿದ್ದಲ್ಲಿ ಮಾತ್ರ ಅದನ್ನು ಮಾರಾಟ ಮಾಡಲು ಬರುತ್ತದೆಂದರೆ ಸರಿ. ದಾವಾಸ್ತಿಯು ಬಾವಿ ಬೆಟ್ಟಪ್ಪ, ನಂತರ ಅವರ ಮಕ್ಕಳ ಹೆಸರಿಗೆ ಆದ ಬಗ್ಗೆ ನಾನು ದಾಖಲೆ ನೋಡಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ನಾನು ಬಾವಿ ಬೆಟ್ಟಪ್ಪನ ಮೂರು ಜನ ಮಕ್ಕಳ ಬಗ್ಗೆ ಹೇಳಿದ್ದೇನೆ ಪಾಲುವಿಭಾಗದ ಬಗ್ಗೆ ಹೇಳಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ನಾನು ದಾವಾಸ್ತಿಯು ವಾದಿ ಮತ್ತು ಅವರ ಸಹೋದರರ ನಡುವೆಯಾದ ಮೌಖಿಕ ಪಾಲುವಿಭಾಗದಂತೆ ವಾದಿಗೆ ಬಂದಿತ್ತು ಅಂತಾ ಹೇಳಿ ಬರೆಸಿದ್ದೇನೆ. ಸದರಿ ಮೌಖಿಕ ಪಾಲುವಿಭಾಗ ಎಲ್ಲಿ ಅಯಿತು ಎಂದು ನನಗೆ ಗೊತ್ತಿಲ್ಲ, ಅದು ಯಾವಾಗ ಆಯಿತೆಂದು ನನಗೆ ಗೊತ್ತಿಲ್ಲ. ಅದು ಯಾರ್ಯಾರ ನಡುವೆಯಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಮೌಖಿಕ ಪಾಲುವಿಭಾಗದಲ್ಲಿ ಯಾರ್ಯಾರು ಹಾಜರಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಮೌಖಿಕ ಪಾಲುವಿಭಾಗದಲ್ಲಿ ಯಾರ್ಯಾರಿಗೆ ಯಾವ್ಯವ ಆಸ್ತಿ ಬಂತು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಮೌಖಿಕ ಪಾಲುಭಾಗವು ಬರವಣಿಗೆಯಾಯಿತಾ ಎಂದರೆ ನನಗೆ ಗೊತ್ತಿಲ್ಲ. ಮೌಖಿಕ ಪಾಲುವಿಭಾಗದಂತೆ ಆಸ್ತಿಗಳು ಬದಲಾವಣೆಯಾಗಿರುತ್ತವೆ ಇಲ್ಲವೆಂದು ನನಗೆ ಗೊತ್ತಿಲ್ಲ.

ವಾದಿಗೆ ಆಸ್ತಿಗಳು ಯಾವ ರೀತಿ ಬಂತು ಅಂತಾ ನಾನು ತಿಳಿದುಕೊಳ್ಳಲು ಪ್ರಯತ್ನಪಟ್ಟಿಲ್ಲ. ನನ್ನ ಹೆಸರಿಗೆ ದಾವಾಸ್ತಿಯನ್ನು ಮಾಡಿ ಅಂತಾ ವಾದಿ ಅರ್ಜಿ ಕೊಟ್ಟಿರುತ್ತಾಂರಾ ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿದ್ದು ಆ ರೀತಿ ಕೊಟ್ಟಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಯಾವ ಆಧಾರದ ಮೇಲೆ ನನ್ನ ಹೆಸರಿಗೆ ಆಸ್ತಿ ಮಾಡಲು ವಾದಿ ಅರ್ಜಿ ಕೊಟ್ಟಿರುತ್ತಾನಂತಾ ನನಗೆ ಹೇಳಲು ಬರುವುದಿಲ್ಲ. ನನ್ನ ಮತ್ತು ವಾದಿಯ ನಡುವೆ ದಾವಾಸ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ನಡೆದಿಲ್ಲ. ವಾದಿ ಮತ್ತು ಪ್ರತಿವಾದಿ ನಂ.1 ರಿಂದ 8 ರವರ ನಡುವೆ ಸನ್ 2007 ರಲ್ಲಿ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸನ್ 2012-13 ರಲ್ಲಿ ಆಯಿತು ಎನ್ನುತ್ತಾರೆ.

ನಿಪಿ-16 ಮತ್ತು 17 ರಲ್ಲಿ ಕಟ್ಟಿರುವ ಕಾಂಪೌಂಡ್ ಸನ್ 2012-13 ರಲ್ಲಿ ಕಟ್ಟಿರುತ್ತಾರೆ. ನಿಪಿ-17 ರಲ್ಲಿ ಕಾಣುವ ಮುಖ್ಯ ರಸ್ತೆ ಹೆಚ್ ಬಿ ಹಳ್ಳಿ ಹಡಗಲಿ ಮುಖ್ಯ ರಸ್ತೆಯಾಗಿರುತ್ತದೆ. ನಿಪಿ-20 ರಲ್ಲಿ ಕಾಂಪೌಂಡ್ ಒಳಗಡೆ ಪ್ರತಿವಾದಿ ನಂ.1 ರಿಂದ 8 ರವರಿಗೆ ಸೇರಿದ ಟ್ರಾಕ್ಟರ್ ಮತ್ತು ಮನೆ ಕಾಣುತ್ತದೆಂದರೆ ಸರಿ ಸಾಕ್ಷಿ ಮುಂದುವರೆದು ಅದು ಸನ್ 2012-13 ರಲ್ಲಿ ಆಗಿದ್ದು ಇರುತ್ತದೆನ್ನುತ್ತಾರೆ. ನಿಪಿ-21 ರ ಫೋಟೋದಲ್ಲಿ ಬಿಟ್ಟಿರುವ ಟ್ರಾಲಿ ಮತ್ತು ಟ್ರಾಕ್ಟರ್ ಪ್ರತಿವಾದಿ ನಂ.1 ರಿಂದ 8 ರವರದು ಆಗಿರುತ್ತದೆಂದರೆ ಸಾಕ್ಷಿಯು ಸನ್ 2012-13 ರಲ್ಲಿ ಕಾಂಪೌಂಡ್ ಕಟ್ಟಿಕೊಂಡು ಅಲ್ಲಿ ಅವರು ಟ್ರಾಕ್ಟರ್ ಮತ್ತು ಟ್ರಾಲಿಯನ್ನು ಬಿಟ್ಟುಕೊಂಡಿರುತ್ತಾರೆನ್ನುತ್ತಾರೆ. ನಿಪಿ-18 ಮತ್ತು 19 ರಲ್ಲಿ ಪ್ರತಿವಾದಿಯರು ಬೆಳೆಯನ್ನು ಹಾಕಿಕೊಂಡಿರುತ್ತಾರೆಂದರೆ ಸಾಕ್ಷಿಯು ವರ್ಷಕ್ಕೊಮ್ಮೆ ಬೆಳೆ ಬರುತ್ತದೆ ಅವರು ಅಲ್ಲಿ ಹಾಕಿಕೊಂಡಿರುತ್ತಾರೆನ್ನುತ್ತಾರೆ.

ಸಾಕ್ಷಿಗೆ 2 ಫೋಟೋಗಳನ್ನು ತೋರಿಸಿ ಪ್ರತಿವಾದಿಯರು ತಮ್ಮ ಆಸ್ತಿಯಲ್ಲಿ ಮನೆಕಟ್ಟಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು ಸದರಿ 2 ಫೋಟೋಗಳನ್ನು ನೋಡಿ ಹೌದು ಅಂತಾ ಉತ್ತರಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-6 ಮತ್ತು 7 ಎಂದು ಗುರುತಿಸಲಾಯಿತು. ಪ್ರತಿವಾದಿಯರು ತಮ್ಮ ವಂಶಸ್ಥರಿಂದಲೂ ದಾವಾಸ್ತಿಯ ಸಾವಧೀನದಲ್ಲಿರುತ್ತಾರೆಂದರೆ ಸಾಕ್ಷಿಯು ಅವರು ಸನ್ 2012-13 ರಿಂದ ದಾವಾಸ್ತಿಯ ಸ್ವಾಧೀನದಲ್ಲಿ ಬಂದಿರುತ್ತಾರೆನ್ನುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಪ್ರತಿವಾದಿಯರು ಸನ್ 2012-13 ರಿಂದ ದಾವಾಸ್ತಿಯ ಸ್ವಾಧೀನದಲ್ಲಿ ಬಂದಿರುತ್ತಾರಂತಾ ನಾನು ಹೇಳಿ ಬರೆಸಿಲ್ಲ. ಪ್ರತಿವಾದಿಯರ ಆಸ್ತಿಯ ಪೂಃಲಂಗಟದ ಪೋರಮ್ಮ, ಪಃರಸ್ತೆ ಬರುತ್ತದೆಂದರೆ ಸರಿ. ಉಃ ಹಳ್ಳಿ ಮಲ್ಲಪ್ಪ ಇವರ ಆಸ್ತಿ ಎಂದರೆ ಸರಿ ಸಾಕ್ಷಿ ಮುಂದುವರೆದು ಹಳ್ಳಿ ಮಲ್ಲಪ್ಪನ ಆಸ್ತಿ ಬರುವುದಿಲ್ಲವೆನ್ನುತ್ತಾರೆ ಹಾಗೂ ದಃಕೊಬ್ಬಜ್ಜಿ ಸುಭಾಕರಪ್ಪ ಇವರ ಸ್ವತ್ತು

ಬರುತ್ತದೆಂದರೆ ಸರಿ. ಸದರಿ ಆಸ್ತಿಗೆ ಗ್ರಾಮ ಪಂಚಾಯ್ತಿಯವರು ಡೋರ್ ನಂಬರ್ ಸಹಾ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ಮೊದಲು ಪ್ರತಿವಾದಿ ನಂ.1 ರಿಂದ 8 ರವರ ಹಿರಿಯರು ಸ್ವಾಧೀನದಲ್ಲಿದ್ದರು ಈಗ ಪ್ರತಿವಾದಿ ನಂ.1 ರಿಂದ 8 ರವರು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

ದಿಃ 09-04-2015 ರಂದು ನಮ್ಮ ಗ್ರಾಮದಲ್ಲಿ ಮಳೆ ಗಾಳಿಯಿಂದ ಮನೆಗಳಿಗೆ ಮತ್ತು ಇತರೆ ಸ್ವತ್ತುಗಳಿಗೆ ಅಪಾರ ಹಾನಿಯಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಪ್ರತಿವಾದಿಯರ ಮನೆಯ ಛಾವಣಿ ಸಹಾ ಹಾರಿಹೋಗಿತ್ತು ಎಂದರೆ ಸರಿಯಲ್ಲ. ಆ ವಿಚಾರ ನನಗೆ ಗೊತ್ತಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ಗ್ರಾಮ ಪಂಚಾಯ್ತಿಯಿಂದ ಪರವಾನಿಗೆ ಪಡೆದು ನೀರಿನ ಸಂಪರ್ಕ ಪಡೆದಿದ್ದಾರೆಂದರೆ ಸಾಕ್ಷಿಯು ತಮ್ಮ ಜಾಗೆಯಲ್ಲಿ ಮಾಡಿಕೊಂಡಿಲ್ಲ ಮಂದಿ ಜಾಗೆಯಲ್ಲಿ ಮಾಡಿಕೊಂಡಿದ್ದಾರೆನ್ನುತ್ತಾರೆ. ಪ್ರತಿವಾದಿಯರು ದಾವಾಸ್ತಿಯ ಕಾನುನುಬದ್ಧ ಮಾಲೀಕರು ಮತ್ತು ಸ್ವಾಧೀನದಾರರು ಇದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ನನ್ನ ಮನೆಯ ಬಚ್ಚಲು ನೀರನ್ನು ಪ್ರತಿವಾದಿ ನಂ.1 ರಿಂದ 8 ರವರ ಆಸ್ತಿಯಲ್ಲಿ ಬಿಡುತ್ತೇನೆಂದರೆ ಸಾಕ್ಷಿಯು ನಾನು ಸರ್ಕಾರಿ ಜಾಗದಲ್ಲಿ ಬಿಡುತ್ತೇನೆನ್ನುತ್ತಾರೆ. ಈ ವಿಚಾರವಾಗಿ ನಮ್ಮ ಮತ್ತು ಪ್ರತಿವಾದಿಯರ ನಡುವೆ ಜಗಳವಾಯಿತು ಎಂದರೆ ಮಾತಿನ ಜಗಳವಾಗಿತ್ತು ಎನ್ನುತ್ತಾರೆ. ಆ ಕಾರಣದಿಂದಾಗಿ ನನ್ನ ಮತ್ತು ಪ್ರತಿವಾದಿ ನಂ.1 ರಿಂದ 8 ರವರ ನಡುವೆ ವೈಶಮ್ಯ ಇದೆ ಎಂದರೆ ಸರಿಯಲ್ಲ. ಆ ಕಾರಣದಿಂದಾಗಿ ನಾನು ವಾದಿಯರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿ 6 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಅವರ ಆಸ್ತಿ ಇರಬಹುದು ಅಲ್ಲಿ ವಿಜಯಾನಂದ್ ಇವರ ಆಸ್ತಿ ಸಹಾ ಇದೆ ಎನ್ನುತ್ತಾರೆ. ನಾನು ವಿಜಯಾನಂದ್ ಇವರ ಆಸ್ತಿ ಇದೆ ಅಂತಾ ಯಾವುದೇ ದಾಖಲೆ ನೋಡಿಲ್ಲ. ಅಲ್ಲಿ ವಾದಿಯರ ಯಾವುದೇ ಆಸ್ತಿ ಇಲ್ಲ ನಾನು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ವಾದಿಯ ಜಮೀನನ್ನು ಲಾವಣಿ ಮಾಡುತ್ತೇನೆಂದರೆ ಸರಿಯಲ್ಲ. ದಾವಾಸ್ತಿ ಮತ್ತು ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹಾ ನಾನು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ